ಸಂಖ್ಯೆ: ಕರೆಮಾಮ/ಅಟಿಐ(ಕೇಂದ್ರ) 2017-18/ ದಿನಾಂಕ: 11.01.2018

# ಪ್ರಕಟಣೆ

ರಾಜ್ಯ ಸಾರ್ವಜನಿಕ ಮಾಹಿತಿ ಹಕ್ಕು ಅಡಿಯಲ್ಲಿ 4(1)(ಬಿ)

## I. ಸುವ್ಯವಸ್ಥಿತ ಸಂಸ್ಥೆ

ಅ) ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ., ಕಂಪನಿಯ ಕಾಯ್ದೆ 1956ರ ಅಡಿಯಲ್ಲಿ ಕರ್ನಾಟಕ ಸರ್ಕಾರದ ಸಂಸ್ಥೆಯಾಗಿ ನೋಂದಾಯಿತವಾಗಿರುತ್ತದೆ. ಸಂಸ್ಥೆಯು ರೇಷ್ಮೆ ವಿನಿಮಯ ಕೇಂದ್ರದ ರಚನೆಯೊಂದಿಗೆ 1979 ರಲ್ಲಿ ಸ್ಥಾಪನೆಯಾಯಿತು 1959 ರ ನಿಭಂದನೆಗಳ ಪ್ರಕಾರ ರೇಷ್ಮೆ ನೂಲಿನ ಬೆಲೆಯನ್ನು ಸ್ಥಿರಗೊಳಿಸುವ ಮತ್ತು ರೇಷ್ಮೆ ಬಿಚ್ಚಾಣಿಕೆದಾರರ ಹಿತ ಕಾಪಾಡುವ ಉದ್ದೇಶದಿಂದ ಸಂಸ್ಥೆಯನ್ನು ಸ್ಥಾಪಿಸಲಾಗಿರುತ್ತದೆ.

ಸಂಸ್ಥೆಯ ಅಧೀಕೃತ ಷೇರು ಬಂಡವಾಳವು ರೂ.40.00 ಕೋಟಿಯಾಗಿದ್ದು, ಇದರಲ್ಲಿ ಪಾವತಿಸಿದ ಷೇರು ಬಂಡವಾಳವು ರೂ.31.45 ಕೋಟಿ. ಪೂರ್ತಿ ಪಾವತಿಸಿದ ಷೇರು ಬಂಡವಾಳವನ್ನು ಕರ್ನಾಟಕ ಸರ್ಕಾರವು ಹೊಂದಿದೆ. ಸಂಸ್ಥೆಯ ನೊಂದಾಯಿತ ಕಛೇರಿ ಎಚ್.ಎಚ್.ಎಸ್. ಮತ್ತು ಹೆಚ್.ಎಂ.ಎಸ್. ಕಟ್ಟಡ, 1ನೇ ಮಹಡಿ, ಕಬ್ಬನ್ ಪೇಟ್ ಮುಖ್ಯ ರಸ್ತೆ, ಬೆಂಗಳೂರು – 560002ರಲ್ಲಿ ಇರುತ್ತದೆ.

ಆ) ಸಂಸ್ಥೆಯು ಬೆಂಗಳೂರು, ರಾಮನಗರ, ಕೊಳ್ಳೇಗಾಲ, ಚಾಮರಾಜನಗರ, ಶಿಡ್ಲಘಟ್ಟ, ಗುಳ್ಳೇದಗುಡ್ಡ, ಚಿಕ್ಕಬಳ್ಳಾಪುರ, ಕೋಲಾರಗಳಲ್ಲಿ, ಒಟ್ಟು 8 ಖರೀದಿ ಶಾಖೆ/ಘಟಕಗಳನ್ನು ಹೊಂದಿರುತ್ತದೆ ಹಾಗೂ ಕರ್ನಾಟಕದಲ್ಲಿ ಬೆಂಗಳೂರು, ಇಳಕಲ್, ಗುಳ್ಳೇದಗುಡ್ಡ, ಗದಗ-ಬೇಟ್‌ಗೇರಿ, ದೊಡ್ಡಬಳ್ಳಾಪುರ ಮತ್ತು ಕೊಳ್ಳೇಗಾಲ, ಧರ್ಮಾವರಂ ಆಂದ್ರಪ್ರದೇಶದಲ್ಲಿ - ಧರ್ಮಾವರಂ, ತೆಲಂಗಾಣದಲ್ಲಿ- ಪೋಚಂಪಲ್ಲಿ ಹಾಗೂ ತಮಿಳುನಾಡು ರಾಜ್ಯದಲ್ಲಿ- ಕಾಂಚೀಪುರಂ, ಸೇಲಂ, ಕುಂಬಕೋಣಂ ಒಟ್ಟು 11 ಮಾರಾಟ ಶಾಖೆಗಳನ್ನು ಹೊಂದಿರುತ್ತದೆ.

ನಮ್ಮ ಗ್ರಾಹಕರು ಸಣ್ಣ ನೇಕಾರರು, ಬೃಹತ್ ನೇಕಾರರು, ಹುರಿಕಾರರು, ರೇಷ್ಮೆ ವ್ಯಾಪಾರಿಗಳು, ಸಹಕಾರಸಂಘಗಳು, ಸರ್ಕಾರಿ ಸಂಸ್ಥೆಗಳು ಆಗಿರುತ್ತದೆ. ಸಂಸ್ಥೆಯ ಕೊಳ್ಳೇಗಾಲ, ಮಾಗಡಿ, ಆನೇಕಲ್, ಬೆಂಗಳೂರಿನ ಹುರಿಶಾಖೆಗಳಲ್ಲಿ ಹುರಿ ರೇಷ್ಮೆನೂಲಿನ ಬೇಡಿಕೆಗೆ ಅನುಗುಣವಾಗಿ ಹುರಿ ಕೆಲಸದ ಸೇವೆಯ ಆಧಾರದ ಮೇಲೆ ರೇಷ್ಮೆ ನೂಲನ್ನು ಹುರಿ ಮಾಡಿಸಲಾಗುತ್ತಿದೆ.

ಇ) ರೇಷ್ಮೆ ನೂಲನ್ನು ನೂಲು ಬಿಚ್ಚಾಣಿಕೆದಾರರಿಂದ ನೇರವಾಗಿ ಖರೀದಿಸಿ ನೇಕಾರರಿಗೆ ಮತ್ತು ವ್ಯಾಪಾರಿಗಳಿಗೆ ಹುರಿ ಮತ್ತು ಕಚ್ಚಾರೇಷ್ಮೆಗಳ ರೂಪದಲ್ಲಿ ಮಾರಾಟ ಮಾಡಲಾಗುತ್ತಿದೆ. ಇದರಿಂದಾಗಿ ರೈತರು ಹಾಗೂ ನೂಲು ಬಿಚ್ಚಾಣಿಕೆದಾರರಿಗೆ ಮಧ್ಯವರ್ತಿಗಳ ಹಾವಳಿಯಿಂದ ತಪ್ಪಿಸಿದಂತಾಗುತ್ತದೆ.

ಉತ್ತಮ ಗುಣಮಟ್ಟದ ರೇಷ್ಮೆ ಮತ್ತು ಗುಣಮಟ್ಟದ ಪರೀಕ್ಷೆಗಾಗಿ ನಾವು ದೃಷ್ಠಿ ಮತ್ತು ತಾಂತ್ರಿಕವಾಗಿ ಪರೀಕ್ಷಿಸಿ ಉತ್ತಮ ಗುಣಮಟ್ಟ ಕಾಪಾಡಲು ಆಧ್ಯತೆ ನೀಡಲಾಗುತ್ತಿದೆ. ಭಾರತ ಸರ್ಕಾರದ ಅಧೀನದ ರೇಷ್ಮೆ ಪರೀಕ್ಷಾ ಕೇಂದ್ರಗಳಲ್ಲಿ ತಾಂತ್ರಿಕ ಮತ್ತು ಸಮಗ್ರ ಪರೀಕ್ಷೆಗಾಗಿ ಬಳಸಿಕೊಳ್ಳಲಾಗುತ್ತಿದೆ.

II. ಕಂಪನಿಯ ಚಟುವಟಿಕೆಗಳು ಕಾರ್ಯ ಮತ್ತು ಕರ್ತವ್ಯಗಳು:

**(i) ಕಂಪನಿಯ ಪ್ರಮುಖ ಕಾರ್ಯಚಟುವಟಿಕೆಗಳು ಹಾಗೂ ಉದ್ದೇಶಗಳು:-**

1) ಕಚ್ಚಾರೇಷ್ಮೆ ಮತ್ತು ಹುರಿರೇಷ್ಮೆ ನೂಲುಗಳನ್ನು ಮಂಡಳಿಯ ಶಾಖೆಗಳ ಮುಖಾಂತರ ಮಾರಾಟ ಮಾಡವುದು.

2) ಕರ್ನಾಟಕ ಸರ್ಕಾರದ ಅಧೀಕೃತ ರೇಷ್ಮೆ ವ್ಯಾಪಾರದ ಸಂಸ್ಥೆಯಾಗಿದ್ದು, ಹುರಿರೇಷ್ಮೆ, ಕಚ್ಚಾರೇಷ್ಮೆ, ಡೂಪಿಯಾನ್ ರೇಷ್ಮೆ ಮತ್ತು ಎಲ್ಲಾ ರೀತಿಯ ರೇಷ್ಮೆ ವ್ಯಾಪಾರಗಳಿಗೆ ಸಹಕಾರಿಯಾಗಿ ರೇಷ್ಮೆ ಇಲಾಖೆ ಅಧೀನವಾಗಿ ಕೆಲಸ ನಿರ್ವಹಿಸುತ್ತಿದೆ. ಅಲ್ಲದೆ ರೇಷ್ಮೆ ಕೃಷಿ ಕರ್ನಾಟಕದಲಿ ಒಂದು ಪ್ರಮುಖ ಉದ್ಯಮವಾಗಿದ್ದು, ರಾಜ್ಯದಲ್ಲಿ ರೇಷ್ಮೆ ಕೃಷಿ ಅವಲಂಬಿತವಾಗಿ ನೇರವಾಗಿ ಮತ್ತು ಪರೋಕ್ಷವಾಗಿ ಸುಮಾರು 3.5 ಲಕ್ಷ ಕುಟುಂಬಗಳು ಅವಲಂಬಿತವಾಗಿದೆ. ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ರೇಷ್ಮೆ ಬೆಲೆ ಸ್ಥಿರೀಕರಣದಲ್ಲಿ ತೊಡಗಿದ ಸಾರ್ವಜನಿಕ ವಲಯದ ಏಕೈಕ ಸಂಸ್ಥೆಯಾಗಿರುತ್ತದೆ.

## (ii) ಅಧಿಕಾರಿಗಳ ಮತ್ತು ನೌಕರರ ಅಧಿಕಾರ ಮತ್ತು ಕರ್ತವ್ಯಗಳು:-

ಅ) ವ್ಯವಸ್ಥಾಪಕ ನಿರ್ದೇಶಕರು ಮಂಡಳಿಯ ವ್ಯವಹಾರಗಳನ್ನು ನಿರ್ವಹಿಸುತ್ತಾರೆ ಹಾಗೂ ಇವರು ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕರಾಗಿರುತ್ತಾರೆ. ಪ್ರಧಾನ ವ್ಯವಸ್ಥಾಪಕರು, ಅಧಿಕಾರಿಗಳು ಮತ್ತು ಸಿಬ್ಬಂದಿಯ ಸಹಯೋಗದಿಂದ ಕಾರ್ಯ ನಿರ್ವಹಿಸುತ್ತಾರೆ.

ಕಂಪನಿ ಕಾಯ್ದೆ 1956 ಮತ್ತು 2013ರ ಅಡಿಯಲ್ಲಿ ಕಂಪನಿ ಕಾರ್ಯದರ್ಶಿ ಕಂಪನಿಗೆ ಸಂಬಂಧಿಸಿದ ಕಾಯ್ದೆ ಮತ್ತು ಕಾನೂನು ವಿಷಯಗಳನ್ನು ನೋಡಿಕೊಳ್ಳುತ್ತಿದ್ದಾರೆ. ಕಂಪನಿಯ ಇತರೆ ವಿಷಯಗಳನ್ನು ವಿವಿಧ ವಿಭಾಗಗಳ ಸಹಾಯಕ ವ್ಯವಸ್ಥಾಪಕರುಗಳು ನೋಡಿಕೊಳ್ಳುತ್ತಿದ್ದಾರೆ. ಇದಲ್ಲದೆ ಅಧಿಕಾರಿಗಳು/ಸಹಾಯಕ ಅಧಿಕಾರಿಗಳು/ಹಿರಿಯ ಸಹಾಯಕರು, ಸಹಾಯಕರು, ದ್ವಿ.ದ.ಸಹಾಯಕರು, ಶೀಘ್ರಲೀಪಿಗಾರರು, ಬೆರಳಚ್ಚುಗಾರರು, ಅನುಚರರು ಮತ್ತು ಚಾಲಕರನ್ನೊಳಗೊಂಡಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ.

ಆ) ಕಂಪನಿಯ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಮಾರುಕಟ್ಟೆ ಪರಿಸ್ಥಿತಿ, ಕಚಾ ್ಚರೇಷ್ಮೆ ಲಭ್ಯತೆ, ಗುಣಮಟ್ಟ, ಬೆಲೆ ಮತ್ತು ದಾಸ್ತಾನು ಮಟ್ಟವನ್ನು ಗಮನದಲ್ಲಿಟ್ಟುಕೊಂಡು ರೇಷ್ಮೆಯನ್ನು ಖರೀದಿ ಮಾಡುತ್ತಾರೆ. ಖರೀದಿ ಶಾಖೆಗಳು/ ವಿಭಾಗಗಳಲ್ಲಿ ಕೆಲಸ ಮಾಡುವ ಅಧಿಕಾರಿ/ಸಿಬ್ಬಂದಿಗಳು ರೇಷ್ಮೆ

ವಿನಿಮಯ ಕೇಂದ್ರಗಳಲ್ಲಿ ನಗದು ನೀಡಿ ರೇಷ್ಮೆ ನೂಲನ್ನು ಗುಣಮಟ್ಟದ ಆದಾರದ ಮೇಲೆ ಮಾರಾಟ ಶಾಖೆಗಳ ಅವಶ್ಯಕತೆಗನುಗುಣವಾಗಿ ಪ್ರಚಲಿತ ಮಾರುಕಟ್ಟೆ ದರಗಳಲ್ಲಿ ಖರೀದಿ ಮಾಡಲಾಗುತ್ತಾದೆ ಮಾಡುತ್ತಾರೆ. ಖರೀದಿಗೆ ಪಾವತಿಸಲು ಕೇಂದ್ರ ಕಛೇರಿಯಿಂದ ಹಣವನ್ನು ಬ್ಯಾಂಕುಗಳ ಮೂಲಕ ಶಾಖೆಗಳಿಗೆ ಬಿಡುಗಡೆ ಮಾಡಲಾಗುತ್ತಿದೆ. ಮಾರಾಟ ಶಾಖೆಗಳಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿ/ನೌಕರರು ಗ್ರಾಹಕರನ್ನು ಸಂಪರ್ಕಿಸಿ ರೇಷ್ಮೆ ಅಗತ್ಯವನ್ನು ನಿರ್ಣಯಿಸಿ ಕೇಂದ್ರ ಕಛೇರಿಗೆ ಬೇಡಿಕೆಯ ಪಟ್ಟಿ ಸಲ್ಲಿಸಬೇಕಾಗುತ್ತದೆ. ಮುಖ್ಯ ಕಛೇರಿಯಿಂದ ನೀಡಿರುವ ಮಾರ್ಗದರ್ಶನದಂತೆ, ನಗದು ಮತ್ತು ಸಾಲದ ಆಧಾರದ ಮೇಲೆ ಮಾರಾಟವನ್ನು ಮಾಡಲಾಗುವುದು.

## iii) ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ ಸೇರಿದಂತೆ ನಿರ್ಣಯ ತೆಗೆದುಕೊಳ್ಳುವಾಗ ಅನುಸರಿಸುವ ಕಾರ್ಯಪ್ರಕ್ರಿಯೆ :-

ಮಹತ್ವದ ನೀತಿ ನಿಯಮಗಳ ಬಗ್ಗೆ ಪ್ರಮುಖ ನಿರ್ಧಾರಗಳನ್ನು ನಿರ್ದೇಶಕರ ಮಂಡಳಿಯ ಸಭೆಯಲ್ಲಿ ತೆಗೆದುಕೊಳ್ಳಲಾಗುತ್ತದೆ. ಖರೀದಿ ಮತ್ತು ಮಾರಾಟ ಶಾಖೆಗಳ ಪ್ರತಿಯೊಂದು ಕಾರ್ಯಪ್ರಗತಿಯ ಬಗ್ಗೆ ಸಹಾಯಕ ವ್ಯವಸ್ಥಾಪಕರು ಮೇಲ್ವಿಚಾರಣೆ ನಡೆಸಿ ಅದರ ಪ್ರಸ್ತಾವನೆ/ವರದಿಯನ್ನು ಪ್ರಧಾನ ವ್ಯವಸ್ಥಾಪಕರಿಗೆ ಸಲ್ಲಿಸುತ್ತಾರೆ. ಈ ವರದಿಯು ಕಾಲ ಕಾಲಕ್ಕೆ ವ್ಯವಸ್ಥಾಪಕ ನಿರ್ದೇಶಕರಿಂದ ಪರಿಶೀಲಿಸಲ್ಪಡುತ್ತದೆ.

**(iv)** ಕಾರ್ಯವಿಧಾನದ ವೈಖರಿಗಳು:–

ಮಂಡಳಿಯ ಖರೀದಿ ಮತ್ತು ಮಾರಾಟ ಪ್ರಕ್ರಿಯೆಗಳನ್ನು ಮಾನದಂಡ ಮತ್ತು ಮಾರ್ಗಸೂಚಿಗಳ ಪ್ರಕಾರ ಮಾಡಲಾಗುತ್ತದೆ. ಕಂಪನಿಯ ಕಾಯ್ದೆಗಳ ಪ್ರಕಾರ ಕಂಪನಿಯನ್ನು ನೋಂದಾಯಿಸಲಾಗಿದೆ ಹಾಗೂ ಅದರ ನಿಬಂಧನೆಗಳ ಮೂಲಕ ಆಡಳಿತ ನಡೆಸಲಾಗುತ್ತಿದೆ. ಪ್ರತಿ ವರ್ಷವು ಕಂಪನಿಯ ಅಂತರಿಕ ಮತ್ತು ಶಾಸನ ಬದ್ಧ ಲೆಕ್ಕ ಪರಿಶೋಧಕರುಗಳಿಂದ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಸಿ ಅಂತಿಮಗೊಳಿಸಲಾಗುತ್ತದೆ. ನಂತರದಲ್ಲಿ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾದಿಂದ ಟಿಪ್ಪಣಿಗಳು ಬಂದ ನಂತರಅದನ್ನು ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಮಂಡಿಸಲಾಗುತ್ತದೆ.

(v) ಕಂಪನಿಯ ನೌಕರರು ನಿರ್ವಹಿಸದ ದಾಖಲೆಗಳು, ನಿಯಮಗಳು, ನಿಯಂತ್ರಣಗಳು, ಸೂಚನೆಗಳು, ಮಾರ್ಗದರ್ಶನಗಳು:

ಕಂಪನಿಯು ಸಿಬ್ಬಂದಿಗೆ ಸಂಬಂದಿಸಿದ ನಿಯಮಗಳು ಮತ್ತು ನಿಭಂದನೆಗಳನ್ನು, ವಿವಿಧ ಶ್ರೇಣಿಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಒಳಗೊಂಡಿರುತ್ತದೆ. ವೇತನ ಸೌಲಭ್ಯಗಳನ್ನು ಅಧಿಕಾರಿಗಳು ಮತ್ತು ನೌಕರರಿಗೆ ಒದಗಿಸಲಾಗುವ ಬಗ್ಗೆ ನಿಯಮಗಳು ಹಾಗೂ ಖರೀದಿ, ಮಾರಾಟ, ಹುರಿ ಮತ್ತು ಲೆಕ್ಕಪತ್ರಗಳಿಗೆ ಪ್ರತ್ಯೇಕ ನಿಯಮಗಳು/ಮಾರ್ಗಸೂಚಿಗಳಿವೆ.

**(vi) <u>ದಾಖಲೆಗಳ ವರ್ಗೀಕರಣದ ನಿಯಂತ್ರಣದ ವಿವರಣೆ:</u>**

1) ಮೆಮೋರಾಂಡಂ&ಆರ್ಟಿಕಲ್ಸ್ಆಫ್ ಅಸೋಸಿಯೇಷನ್
2) ಸಿಬ್ಬಂದಿಗೆ ಸಂಬಂದಿಸಿದ ನಿಬಂಧನೆಗಳು, ವೃಂದ ಮತ್ತು ನೇಮಕಾತಿ ನಿಯಮಗಳು
3) ಖರೀದಿ, ಮಾರಾಟ ಮತ್ತು ಹುರಿ ಚಟುವಟಿಕೆಗಳ ಮಾರ್ಗಸೂಚಿ ಮತ್ತು ನಿಯಮಗಳು.
4) ಲೆಕ್ಕಪತ್ರ / ಲೆಕ್ಕಪರಿಶೋಧನೆ ಮಾರ್ಗಸೂಚಿ.
5) ಕಛೇರಿ ಕಡತಗಳು, ಲೆಕ್ಕ ಮತ್ತು ಪುಸ್ತಕಗಳು

(vii) **<u>ಸಾರ್ವಜನಿಕರ ಸಲಹೆ ಅಥವಾ ಪ್ರಾತಿನಿಧ್ಯಕ್ಕಾಗಿ ಅಸ್ತಿತ್ವದಲ್ಲಿರುವ ವ್ಯವಸ್ಥೆಯ ವಿವರಗಳು:</u>**

ಕಂಪನಿಯು ತನ್ನ ನೀತಿಯನ್ನು ರೂಪಿಸುವಲ್ಲಿ ಸಾರ್ವಜನಿಕರನ್ನು ಒಳಗೊಳ್ಳುವುದಿಲ್ಲ ಏಕೆಂದರೆ ಇದು ಒಂದು ವಾಣಿಜ್ಯ ಸಂಸ್ಥೆಯಾಗಿದ್ದು ಮತ್ತು ಉದ್ಯಮದಲ್ಲಿನ ಇತರ ಖಾಸಗಿ ವ್ಯಾಪಾರಿಗಳೊಂದಿಗೆ ಸ್ಪರ್ಧೆಯಲ್ಲಿ ವ್ಯವಹಾರವನ್ನು ಮಾಡಬೇಕಾಗುತ್ತದೆ. ಕಂಪನಿಯು ನೀತಿಗಳನ್ನು ನಿರ್ವಹಣಾ ಮಟ್ಟದಲ್ಲಿ ರೂಪಿಸುತ್ತ. ಮಂಡಳಿಯು ಕರ್ನಾಟಕ ಸರ್ಕಾರದಿಂದ ನೇಮಕಗೊಂಡ ನಿರ್ದೇಶಕರನ್ನು ಒಳಗೊಂಡಿದೆ, ಆದಾಗ್ಯೂ ಕಚ್ಚಾರೇಷ್ಮೆ, ಹುರಿರೇಷ್ಮೆಗಳಿಗೆ ಸಂಬಂದಿಸಿದ ವ್ಯವಹಾರದ ಸಮಯದಲ್ಲಿ ಸಾಲದ ಗ್ರಾಹಕರು ಮತ್ತು ನಗದು ಗ್ರಾಹಕರ ಜೊತೆ ಅಗತ್ಯವಾದ ಸಮಾಲೋಚನೆಗಳನ್ನು ನಡೆಸಲಾಗುತ್ತದೆ.

(viii) ನಿರ್ದೇಶಕರ ಮಂಡಳಿಯ ನಡುವಳಿಗಳನ್ನು ಸಾರ್ವಜನಿಕರ ಕೋರಿಕೆ ಮೇಲೆ ಮಾಹಿತಿಗಾಗಿ ನೀಡಲಾಗುತ್ತದೆ.

ಅ) ಮಂಡಳಿಯ ನಿರ್ದೇಶಕರ ಪಟ್ಟಿ
ಆ) ಇತರೆ ಸಮಿತಿಗಳು

(ix) <u>ಅಧಿಕಾರಿಗಳು ಮತ್ತು ನೌಕರರು ವಿವರಗಳು.</u>

<u>(**x**) ಅಧಿಕಾರಿಗಳು ಮತ್ತು ನೌಕರರ ಮಾಸಿಕ ವೇತನ ಇತರೆ ಭತ್ಯೆ ವಿವರಗಳು</u>

ಮಂಡಳಿಗೆ ಪ್ರತ್ಯಕವಾದ ಗ್ರಂಥಾಲಯ ಹಾಗೂ ವಾಚನಾಲಯ ಸಾರ್ವಜನಿಕರಿಗೆ ಇರುವುದಿಲ್ಲ. ಪ್ರತಿ ಅಧಿಕಾರಿ/ ನೌಕರರ ವೇತನದ ವಿವರಗಳ ಅನುಭಂದ ಮತ್ತು ಇತರ ಭತ್ಯೆಗಳ ವಿವರ:

1) ವೈಧ್ಯಕೀಯ ಭತ್ಯೆ ಮಾಸಿಕ ರೂ.200/– ಇಎಸ್ಐ ವ್ಯಾಪ್ತಿಗೆ ಬರುವದಿಲ್ಲ ಅಂತಹ ನೌಕರರಿಗೆ.
2) ಒಳಾದಾಖಲಾಗಿ ಚಿಕಿತ್ಸೆ ಪಡೆದ ನೌಕರರ ಮತ್ತು ಅವರ ಅವಲಂಬಿತರಿಗೆ ವರ್ಷಕ್ಕೆ ರೂ.10,000/– ವೈದ್ಯಕೀಯ ವೆಚ್ಚವನ್ನು ಭರಿಸಿಲಾಗುವುದು.
3) ಮಾತೃ ಸಂಸ್ಥೆ/ ಸರ್ಕಾರದಿಂದ ನೇಮಕವಾದ ನಿಯೋಜಿತ ಅಧಿಕಾರಿಗಳಿಗೆ ಅರ್ಹರಾದ ಭತ್ಯೆಗಳು ಇದ್ದಲ್ಲಿ ಭರಿಸಲಾಗುವುದು.

(xi) ಕ್ರಿಯಾ ಯೋಜನೆಗೆ ಅನುಸಾರವಾಗಿ ಆಯವ್ಯಯದಲ್ಲಿ ನಿಗದಿತ ವೆಚ್ಚವನ್ನು ಮತ್ತು ವರದಿಯಂತೆ ವಿತರಣೆ ಮಾಡಲಾಗುವುದು.

ಕಂಪನಿಯು ಕ್ರಿಯಾಯೋಜನೆಗೆ ಅನುಸಾರವಾಗಿ ಕಾರ್ಯಗತಗೊಳಿಸಲು ನಿರ್ದೇಶಕರ ಮಂಡಳಿಯಿಂದ ಅನುಮತಿ ಪಡೆದು ಸಾದ್ಯವಾದಷ್ಟು ಖರೀದಿ, ಮಾರಾಟ ಮಾಡಲಾಗುವುದು ಆಡಳಿತಾತ್ಮಕ ವೆಚ್ಚಗಳಿಗೆ ಸರ್ಕಾರ ಧನ ಸಹಾಯ ನೀಡುತ್ತಿದೆ.

(xii) ಸಹಾಯಧನ ಕಾರ್ಯಕ್ರಮಗಳ ಬಗ್ಗೆ ನಿಯೋಜಿಸಲಾದ ಕಾರ್ಯಕ್ರಮಗಳು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರ = ಅನ್ವಯಿಸುವುದಿಲ್ಲ.

(xiii) ಮಂಜೂರು ಮಾಡುವ ಅನುಮತಿ, ಪರವಾನಾಗಿ ಅಥವಾ ಅಧಿಕಾರವನ್ನು ಪಡೆದವರ ವಿವರಗಳ = ಅನ್ವಯಿಸುವುದಿಲ್ಲ.

(xiv) ವಿವರವಾದ ಮಾಹಿತಿಯನ್ನು ವಿದ್ಯುನ್ಮಾನ ಬಳಸಿ ಪ್ರಕಟಿಸಲಾಗುವುದು.

(xv) ಸಾರ್ವಜನಿಕರಿಗೆ ಗ್ರಂಥಾಲಯ / ವಾಚನಾಲಯ ವ್ಯವಸ್ಥೆ ಇರುವುದಿಲ್ಲ..

(xvi) ಸಾರ್ವಜನಿಕ ಸಂಪರ್ಕ ಅಧಿಕಾರಿಗಳ ಹೆಸರು, ಪದನಾಮ ಮತ್ತು ಇತರೆ ಮಾಹಿತಿ:

1. ಶ್ರೀಮತಿ ರೇಣುಕಾದೇವಿ, ಪ್ರಧಾನ ವ್ಯವಸ್ಥಾಪಕರು,
   ರಾಜ್ಯ ಸಾರ್ವಜನಿಕ ಮಾಹಿತಿಅಧಿಕಾರಿ, ಕರ್ನಾಟಕರೇಷ್ಮೆ ಮಾರಾಟ ಮಂಡಳಿ,
   ಎಚ್.ಎಸ್.&ಎಚ್.ಎಂಎಸ್, ಸಂಕೀರ್ಣ 1ನೇ ಮಹಡಿ, ಕಬ್ಬನ್ ಪೇಟ್ ಮುಖ್ಯರಸ್ತೆ,
   ಬೆಂಗಳೂರು –560 002.
   ದೂರವಾಣಿ ಸಂಖ್ಯೆ: 080–22216129

2. ಶ್ರೀ ಟಿ.ಆರ್‌ರಾವ್, ಸಹಾಯಕ ವ್ಯವಸ್ಥಾಪಕರು(ಖರೀದಿ) ಪ್ರಭಾರ
   ಸಹಾಯಕರಾಜ್ಯ ಸಾರ್ವಜನಿಕ ಮಾಹಿತಿಅಧಿಕಾರಿ,
   ಕರ್ನಾಟಕರೇಷ್ಮೆ ಮಾರಾಟ ಮಂಡಳಿ, ಎಚ್.ಎಸ್.&ಎಚ್.ಎಂಎಸ್, ಸಂಕೀರ್ಣ 1ನೇ
   ಮಹಡಿ, ಕಬ್ಬನ್ ಪೇಟ್ ಮುಖ್ಯರಸ್ತೆ, ಬೆಂಗಳೂರು –560 002.
   ದೂರವಾಣಿ ಸಂಖ್ಯೆ: 080–41475076

3. ಶ್ರೀ ಸೈಯದ್ ಶಬ್ಬೀರ್‌ಅಹಮದ್ ಸಹಾಯಕ ವ್ಯವಸ್ಥಾಪಕರು(ಕೇ.ಉ) ಪ್ರಭಾರ
   ಸಹಾಯಕರಾಜ್ಯ ಸಾರ್ವಜನಿಕ ಮಾಹಿತಿಅಧಿಕಾರಿ,
   ಕರ್ನಾಟಕರೇಷ್ಮೆ ಮಾರಾಟ ಮಂಡಳಿ, ಎಚ್.ಎಸ್.&ಎಚ್.ಎಂಎಸ್, ಸಂಕೀರ್ಣ 1ನೇ
   ಮಹಡಿ, ಕಬ್ಬನ್ ಪೇಟ್ ಮುಖ್ಯರಸ್ತೆ, ಬೆಂಗಳೂರು –560 002.
   ದೂರವಾಣಿ ಸಂಖ್ಯೆ: 080–22216316,22220410

ಪ್ರಸ್ತುತ ನಿರ್ದೇಶಕರ ಮಂಡಳಿ

ಕಂಪನಿಯಲ್ಲಿ 12 ನಿರ್ದೇಶಕರುಗಳು ಇದ್ದುಅವರುಗಳ ವಿವರ:–

1) ಶ್ರೀ ಟಿ.ಪಿ. ರಮೇಶ್, – ಅಧ್ಯಕ್ಷರು,
2) ಸರ್ಕಾರದ ಕಾರ್ಯದರ್ಶಿಗಳು –
ನಿರ್ದೇಶಕರುತೋಟಗಾರಿಕೆ ಮತ್ತುರೇಷ್ಮೆ ಇಲಾಖೆ.
3) ರೇಷ್ಮೆ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, – ನಿರ್ದೇಶಕರು
ರೇಷ್ಮೆ ಇಲಾಖೆ, ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ.,
4) ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ – ನಿರ್ದೇಶಕರು
ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ.
5) ಶ್ರೀಮತಿ ಮೆಹಬೂಬ ಕಾತೂನ್, – ನಿರ್ದೇಶಕರು
6) ಶ್ರೀ ಹೆಚ್.ಎನ್.ಪ್ರಕಾಶ್‌ರೆಡ್ಡಿ – ನಿರ್ದೇಶಕರು
7) ಶ್ರೀ ಎನ್. ರಾಮಸ್ವಾಮಿ, – ನಿರ್ದೇಶಕರು
8) ಶ್ರೀ ಬಿ.ಪಿ.ರಾಮಚಂದ್ರ, – ನಿರ್ದೇಶಕರು
9) ಶ್ರೀ ಎಂ.ಎನ್. ಮಂಜುನಾಥ್ – ನಿರ್ದೇಶಕರು
10)ಶ್ರೀ ಗೋವಿಂದರಾಜು – ನಿರ್ದೇಶಕರು
11)ಶ್ರೀ ಶಂಬು – ನಿರ್ದೇಶಕರು
12)ಶ್ರೀ ಟಿ.ಲೋಕೇಶ್ – ನಿರ್ದೇಶಕರು

ಇತರೆ ಸಮಿತಿಗಳು:–

ಲೆಕ್ಕಪರಿಶೋಧನಾ ಸಮಿತಿ:–

1) ಜವಳಿಅಭಿವೃದ್ಧಿಆಯುಕ್ತರು ಹಾಗೂ – ಅಧ್ಯಕ್ಷರು
ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ.
2) ರೇಷ್ಮೆಅಭಿವೃದ್ಧಿಆಯುಕ್ತರು ಹಾಗೂ ನಿರ್ದೇಶಕರುರೇಷ್ಮೆ ಇಲಾಖೆ, – ಸದಸ್ಯರು
ವ್ಯವಸ್ಥಾಪಕ ನಿರ್ದೇಶಕರುಕರ್ನಾಟಕರೇಷ್ಮೆ ಮಾರಾಟ ಮಂಡಳಿ.,
3) ಶ್ರೀ. ಎಂ.ಎನ್. ಮಂಜುನಾಥ್, ನಿರ್ದೇಶಕರು, – ಸದಸ್ಯರು
ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ.,

ಇಲಾಖಾ ಭಡ್ತಿ ಸಮಿತಿ:-

(ಅ) 183ನೇ ಮಂಡಳಿ ಸಭೆಯ ತೀರ್ಮಾನದಂತೆ ಠರಾವು ಸಂಖ್ಯೆ:2286ರಂತೆ ಎರಡು ಸಮಿತಿಗಳನ್ನು ರಚಿಸಲಾಗಿದೆ.

1) ಅನುಚರರ ಹುದ್ದೆಯಿಂದ ಸಹಾಯಕ ವ್ಯವಸ್ಥಾಪಕರು ಹುದ್ದೆಗೆ

ಅ) ವ್ಯವಸ್ಥಾಪಕ ನಿರ್ದೇಶಕರು, ಕ.ರೇ.ಮಾ.ಮ - ಅಧ್ಯಕ್ಷರು
ಆ) ಜಂಟಿ ನಿರ್ದೇರ್ಶಕರು (ಆಡಳಿತ) ರೇಷ್ಮೆ ಇಲಾಖೆ - ಸದಸ್ಯರು
ಇ) ಸಹಾಯಕ ವ್ಯವಸ್ಥಾಪಕರು (ಆಡಳಿತ) ಪ್ರಭಾರ - ಸಂಚಾಲಕರು

2) ಸಹಾಯಕ ವ್ಯವಸ್ಥಾಪಕರ ಹುದ್ದೆಯಿಂದ ವ್ಯವಸ್ಥಾಪಕರು ಹುದ್ದೆಗೆ

ಅ) ವ್ಯವಸ್ಥಾಪಕ ನಿರ್ದೇಶಕರು, ಕ.ರೇ.ಮಾ.ಮ - ಅಧ್ಯಕ್ಷರು
ಆ) ಜಂಟಿ ನಿರ್ದೇರ್ಶಕರು (ಆಡಳಿತ) ರೇಷ್ಮೆ ಇಲಾಖೆ - ಸದಸ್ಯರು
ಇ) ಜಂಟಿ ನಿರ್ದೇರ್ಶಕರು (ಆಡಳಿತ) ಜವಳಿ ಇಲಾಖೆ - ಸದಸ್ಯರು
ಈ) ಸಹಾಯಕ ವ್ಯವಸ್ಥಾಪಕರು (ಆಡಳಿತ) ಪ್ರಭಾರ - ಸಂಚಾಲಕರು

(ಆ) ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡಗಳ ಸಿಬ್ಬಂದಿಗಳ ಮೇಲಿನ ದೌರ್ಜನ್ಯ ಪರಮರ್ಶಿಸಲು ಸಮಿತಿ:-

1) ಸಹಾಯಕ ವ್ಯವಸ್ಥಾಪಕರು (ಆಡಳಿತ) ಪ್ರಭಾರ - ಸದಸ್ಯರು
2) ಸಹಾಯಕ ವ್ಯವಸ್ಥಾಪಕರು (ಹಣಕಾಸು) ಪ್ರಭಾರ - ಸದಸ್ಯರು

(ಇ) ಕೆಲಸದ ಜಾಗದಲ್ಲಿ ಮಹಿಳೆಯ ಮೇಲಿನ ಲೈಂಗಿಕ ಕಿರುಕುಳ ಪರಾಮರ್ಶಿಸಲು ಸಮಿತಿ:-

1) ಮಹಿಳಾ ಅಧಿಕಾರಿ - ಅಧ್ಯಕ್ಷರು
2) ಎಲ್ಲಾ ಶ್ರೇಣಿಯಲ್ಲಿಒಬ್ಬರು ನೌಕರರು ಸಮಿತಿಯ ಸದಸ್ಯರಾಗಿರುತ್ತಾರೆ.

ಪ್ರಧಾನ ವ್ಯವಸ್ಥಾಪಕರು,
ರಾಜ್ಯ ಸಾರ್ವಜನಿಕ ಮಾಹಿತಿಅಧಿಕಾರಿ,
ಕರ್ನಾಟಕರೇಷ್ಮೆ ಮಾರಾಟ ಮಂಡಳಿ,

ರವರಿಗೆ:

1) ಸರ್ಕಾರದ ಕಾರ್ಯದರ್ಶಿಗಳು
   ತೋಟಗಾರಿಕೆ ಮತ್ತುರೇಷ್ಮೆ ಇಲಾಖೆ.
   ಬಹುಮಹಡಿಕಟ್ಟಡ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
   ಸಾರ್ವಜನಿಕ ಉದ್ಯಮಗಳ ಇಲಾಖೆ.
   ನಂ:711, ಗೇಟ್:1, 2ನೇ ಹಂತ, 7ನೇ ಮಹಡಿ,
   ಬಹುಮಹಡಿಕಟ್ಟಡ, ಬೆಂಗಳೂರು.

ಪ್ರತಿ:

1) ಅಧೀನ ಕಾರ್ಯದರ್ಶಿಗಳು
   ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ.
   ವಿಕಾಸ ಸೌಧ, ಬೆಂಗಳೂರು.
2) ಅಧೀನ ಕಾರ್ಯದರ್ಶಿಗಳು
   ಆಡಳಿತ ಮತ್ತು ಸಿಬ್ಬಂದಿ ಸುಧಾರಣಾ ಇಲಾಖೆ (ಜನಸ್ಪಂದನ ಕೋಶ)
   ಬಹುಮಹಡಿ ಕಟ್ಟಡ, ಬೆಂಗಳೂರು.
3) ಕಂಪನಿ ಕಾರ್ಯದರ್ಶಿ,
4) ಎಲ್ಲಾ ಸಹಾಯಕ ವ್ಯವಸ್ಥಾಪಕರುಗಳು
5) ಎಲ್ಲಾ ಶಾಖಾಧಿಕಾರಿಗಳು
6) ಸೂಚನಾ ಫಲಕ,
7) ವ್ಯ. ನಿ ರವರ ಆಪ್ತ ಶಾಖೆ.

**ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ., ದಿನಾಂಕ: 31–12–2017 ಅಂತ್ಯಕ್ಕೆ ಅಧಿಕಾರಿ ಮತ್ತು ಸಿಬ್ಬಂದಿಗಳ ವಿವರ, ಮಾಸಿಕ ವೇತನದ ವಿವರಗಳು**

**( ಅಧಿಸೂಚನೆ ಸಂಖ್ಯೆ . ix & x ನೋಡಿರಿ)**

## ಅಧಿಕಾರಿಗಳ ಪಟ್ಟಿ

| ಸಂಖ್ಯೆ | ಹೆಸರು. | ಪಧನಾಮ | ಒಟ್ಟು ಮಾಸಿಕ ವೇತನ. | ಷರಾ |
|---|---|---|---|---|
| 1 | ಕೆ.ಎಸ್. ಮಂಜುನಾಥ | ವ್ಯವಸ್ಥಾಪಕ ನಿರ್ದೇಶಕರು | --- | **ಸಮವರ್ತಿತ ಪ್ರಭಾರ** |
| 2 | ಕೆ.ಜಿ. ರೇಣುಕಾದೇವಿ | ಪ್ರಧಾನ ವ್ಯವಸ್ಥಾಕರು | --- | **ಜಂಟಿ ನಿರ್ದೇಶಕರು ರೇಷ್ಮೆ ಇಲಾಖೆ ಹೆಚ್ಚುವರಿ ಪ್ರಭಾರ** |
| 3 | ಕೆ.ಎನ್. ನರಸಿಂಹಮೂರ್ತಿ | ಕಂಪನಿ ಕಾರ್ಯದರ್ಶಿ | 25000 | ಗುತ್ತಿಗೆ ಅಧಾರ ಮೇರೆಗೆ |

## ಸಹಾಯಕ ವ್ಯವಸ್ಥಾಪಕರು ಪ್ರಭಾರ

| | | | | ಷರಾ |
|---|---|---|---|---|

| ಸಂಖ್ಯೆ | ಹೆಸರು. | ಶಾಖೆ/ವಿಭಾಗ. | ಒಟ್ಟು ಮಾಸಿಕ ವೇತನ. | |
|---|---|---|---|---|
| 4 | ಟಿ.ಆರ್ ರಾವ್ | ಖರೀದಿ, ಹುರಿ ಮತ್ತು ಹಣಕಾಸು ವಿಭಾಗ, ಬೆಂಗಳೂರು | 91557 | |
| 5 | ಸಯ್ಯದ್ ಶಬ್ಬೀರ್ ಅಹಮದ್ | ಕೇಂದ್ರ ಉಗ್ರಾಣ, ಮಾರುಕಟ್ಟೆ ಮತ್ತು ಆಡಳಿತ ವಿಭಾಗ, ಬೆಂಗಳೂರು | 81162 | |

**ಸಹಾಯಕ ಅಧಿಕಾರಿ**

| | | | | |
|---|---|---|---|---|
| 6 | ಆರ್ ಸುರೇಶ್ | ನಿಯೋಜನೆ | 58388 | **ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ದಿ ನಿಗಮ ನಿಯಮಿತ** |
| 7 | ಆರ್ ಎಂ.ಎ. ಸತೀಶ್ ಕುಮಾರ | ಮಾರಾಟ ಶಾಖೆ, ಕುಂಭಕೋಣಂ, | 53289 | |
| 8 | ಎನ್. ಸಿದ್ದಬಸವ | ನಿಯೋಜನೆ | 52996 | **ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ದಿ ನಿಗಮ ನಿಯಮಿತ** |

# ಹಿರಿಯ ಸಹಾಯಕರು.

| | | | | |
|---|---|---|---|---|
| 9 | ಎಸ್.ಜಿ. ದಿನೇಶ್ | ಮಾರುಕಟ್ಟೆ ವಿಭಾಗ, ಬೆಂಗಳೂರು. | 57301 | |
| 10 | ಶಾಯುಬ್ ಉರ್ ರೆಹಮಾನ್ | ಖರೀದಿ ಮತ್ತು ಆಡಳಿತ ವಿಭಾಗ, ಬೆಂಗಳೂರು | 55790 | |
| 11 | ಸೀನಪ್ಪ | ಮಾರಾಟ ಶಾಖೆ, ಸೇಲಂ | 43548 | |
| 12 | ವಿ.ಎಂ. ಬೆಳ್ಳುಡಿ | ಮಾರಾಟ ಶಾಖೆ, ಗುಳೇದ ಗುಡ್ಡ | 55550 | |
| 13 | ಬಿ ಶ್ರೀಪತಿರಾವ್ | .ಹಣಕಾಸು ವಿಭಾಗ, ಬೆಂಗಳೂರು. | 55890 | |
| 14 | ಎನ್. ರೇವಣ್ಣ ಸಿದ್ದಪ್ಪ | ಮಾರಾಟ ಶಾಖೆ, ವಿಜಯಪುರ | 54365 | |
| 15 | ಟಿ.ಕೃಷ್ಣ | ನಿಯೋಜನೆ | 55890 | **ಕರ್ನಾಟಕ ರಾಜ್ಯ ಪಾನೀಯ ನಿಗಯ ನಿಯಮಿತ** |
| 16 | ಬಿ.ಪಿ. ಚಂದ್ರ ಶೇಖರ್ | ನಿಯೋಜನೆ | 55890 | **ಕರ್ನಾಟಕ ರಾಜ್ಯ ಪಾನೀಯ ನಿಗಯ ನಿಯಮಿತ** |
| 17 | ಎಂ.ಗುರುದೇವ್ | ಮಾರಾಟ ಶಾಖೆ, ಬೆಂಗಳೂರು | 55790 | |
| 18 | ಎಂ.ಡಿ. ಶ್ರೀನಿವಾಸ್ | ಮಾರಾಟ ಶಾಖೆ, ಬೆಂಗಳೂರು | 53965 | |

| | | | | |
|---|---|---|---|---|
| 19 | ಕೆ.ಜಿ. ಸದಾಶಿವಯ್ಯ | ಖರೀದಿ ಶಾಖೆ, ರಾಮನಗರ, | 51302 | |
| 20 | ಸಿದ್ದರಾಜು | ಖರೀದಿ ಶಾಖೆ, ಚಾಮರಾಜನಗರ | 34491 | |
| 21 | ಬಿ. ಮಂಜುಳಾದೇವಿ | ಕೇಂದ್ರ ಉಗ್ರಾಣ ಹಾಗೂ ಖರೀದಿ ವಿಭಾಗ, ಬೆಂಗಳೂರು | 64799 | |

## ಸಹಾಯಕರು.

| | | | | |
|---|---|---|---|---|
| 22 | ಆರ್,ಕೆ. ಮಹಾಪಾತ್ರ | ಮಾರಾಟ ಶಾಖೆ, ಕಂಚೀಪುರಂ | 39251 | |
| 23 | ಕೆ.ಎಂ. ನಾರಾಯಣಗೌಡ | ನಿಯೋಜನೆ | 44236 | ತಹಸೀಲ್ದಾರ್ ಬಾಗೇಪಲ್ಲಿ ತಾಲ್ಲೂಕು ಕಾರ್ಯಾಲಯ |
| 24 | ಸಮೀನ ಸಿದ್ದಿಕ್ | ನಿಯೋಜನೆ | 46608 | **ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ** |
| 25 | ಟಿ.ಅನಂತನಾರಾಯಣ್ | ಹುರಿ ವಿಭಾಗ, ಬೆಂಗಳೂರು | 45682 | . |
| 26 | ಕೆ.ಬಿ. ನಂಜಪ್ಪ | ಖರೀದಿ ಶಾಖೆ, ಕೋಲಾರ, | 40505 | |
| 27 | ವೆಂಕಟೆಶಯ್ಯ | ಅಧ್ಯಕ್ಷ ರವರ ವಿಭಾಗ, ಬೆಂಗಳೂರು | 42030 | |
| 28 | ಜೆ.ಎಲ್. ರಾಮಚಂದ್ರಯ್ಯ | ಮಾರಾಟ ಶಾಖೆ, ಇಳಕಲ್ | 40946 | |
| 29 | ಎಸ್.ಲೀಲಾವಾತಿ | ಹಣಕಾಸು ವಿಭಾಗ, ಬೆಂಗಳೂರು. | 31908 | |
| 30 | ಎಂ. ರಾಮಕೃಷ್ಣಪ್ಪ | ಮಾರಾಟ ಶಾಖೆ, ದೊಡ್ಡಬಳ್ಳಾಪುರ | 36342 | |
| 31 | ರುದ್ರಾನಯಕ್ | ಖರೀದಿ ಮತ್ತು ಮಾರಾಟ ಶಾಖೆ, ಕೊಳ್ಳೆಗಾಲ | 36342 | |

## ದ್ವಿತೀಯ ದರ್ಜೆ ಸಹಾಯಕರು.

| | | | | |
|---|---|---|---|---|
| 32 | ಎಂ. ಲಲಿತ ಜೈರಾಮ್ | ಆಡಳಿತ ವಿಭಾಗ, ಬೆಂಗಳೂರು | 35000 | |
| 33 | ಮಿಯಾನ್ ಖಾನ್ | ಮಾರಾಟ ಶಾಖೆ, ಪೋಚಂಪಲ್ಲಿ | 33109 | |
| 34 | ಕೆ.ಎ.ನೀಲಕಂಠಯ್ಯ | ಖರೀದಿ ಶಾಖೆ, ಶಿಡ್ಲಘಟ್ಟ | 32809 | |

| | | | | |
|---|---|---|---|---|
| 35 | ಎಸ್. ನಾಗರಾಜು | ಹುರಿ ಶಾಖೆ, ಆನೇಕಲ್ | 31261 | |
| 36 | ಟಿ.ಕೃಷ್ಣಪ್ಪ | ಹುರಿ ಶಾಖೆ, ಮಾಗಡಿ | 31211 | |
| 37 | ವಿ.ಸರಸ್ವತಿ | ಹುರಿ ಶಾಖೆ, ಮಾಗಡಿ. | 28938 | |
| 38 | ದೇವಮ್ಮ | ಮಾರುಕಟ್ಟೆ ವಿಭಾಗ, ಬೆಂಗಳೂರು. | 30149 | |
| 39 | ಎಲ್.ಜಯಂತಿ | ಹುರಿ ವಿಭಾಗ, ಬೆಂಗಳೂರು | 27377 | |
| 40 | ಕೆ. ಮೀನಾಕುಮಾರಿ | ಹಣಕಾಸು ವಿಭಾಗ, ಬೆಂಗಳೂರು. | 27377 | |
| 41 | ಎಚ್.ಕೆ. ಉಷಾರಾಣಿ | ಕೇಂದ್ರ ಉಗ್ರಾಣ ಮತ್ತು ಆಡಳಿತ ವಿಭಾಗ, ಬೆಂಗಳೂರು | 27377 | |
| 42 | ಸಿ.ಹೇಮಾವತಿ | ಕೇಂದ್ರ ಉಗ್ರಾಣ ಮತ್ತು ಆಡಳಿತ ವಿಭಾಗ, ಬೆಂಗಳೂರು | 22006 | |
| 43 | ಡಿ.ಅನಿಲ್ ಕ್ಯಾರಲ್ ಸನ್ | ವ್ಯನಿ ರವರ ವಿಭಾಗ, ಬೆಂಗಳೂರು | 22206 | |
| 44 | ಎಸ್.ಶಿವಶಂಕರ್ | ಹಣಕಾಸು ವಿಭಾಗ, ಬೆಂಗಳೂರು. | 22006 | |

## ಬೆರಳಚ್ಚುಗಾರರು.

| | | | | |
|---|---|---|---|---|
| 45 | ಜಿ.ವಿ.ಕಾಮೇಶ್ವರ್ | ಹಣಕಾಸು ವಿಭಾಗ, ಬೆಂಗಳೂರು. | 32623 | |

## ಅನುಚರರು.

| (1) | (2) | (3) | (4) | **(5)** |
|---|---|---|---|---|
| 46 | ಜಿ.ಕಣ್ಣನ್ | ಮಾರಾಟ ಶಾಖೆ, ಕುಂಭಕೋಣಂ, | 32318 | |
| 47 | ಜೆ.ರವಿಚಂದ್ರನ್ | ಮಾರಾಟ ಶಾಖೆ, ಕುಂಭಕೋಣಂ, | 32268 | |
| 48 | ಕೆ,ರಾಧಮ್ಮ | ಹಣಕಾಸು ವಿಭಾಗ, ಬೆಂಗಳೂರು. | 33568 | |
| 49 | ಬಿ.ರಂಗಯ್ಯ | ಹುರಿ ವಿಭಾಗ,ಬೆಂಗಳೂರು. | 33643 | |
| 50 | ಲಕ್ಷ್ಮೀನಾರಾಯಣ | ಕೇಂದ್ರ ಉಗ್ರಾಣ,ಬೆಂಗಳೂರು | 33568 | |
| 51 | ಎನ್.ಧನಲಕ್ಷ್ಮೀ | ಆಡಳಿತ ವಿಭಾಗ, ಬೆಂಗಳೂರು | 28370 | |
| 52 | ಪಿ. ನಿರ್ಮಲ | ಮಾರುಕಟ್ಟೆ ವಿಭಾಗ, ಬೆಂಗಳೂರು. | 23692 | |
| 53 | ನಿಂಗಮ ಜನ್ನ | ಆಡಳಿತ ವಿಭಾಗ, ಬೆಂಗಳೂರು | 19361 | |

## ಗುತ್ತಗೆ ಆಧಾರದ ಚಾಲಕರುಗಳು

| | | | | |
|---|---|---|---|---|
| 54 | ಎಂ. ಹನುಮಂತರಾಜು | ವಾಹನ ನಿರ್ವಹಣೆಗಾರರು | 17000 | |
| 55 | ಕೆ. ಶ್ರೀನಿವಾಸ್ | ವಾಹನ ನಿರ್ವಹಣೆಗಾರರು | 17000 | |

| | | | | |
|---|---|---|---|---|
| 56 | ಟಿ.ಎ.ಜಾನಿ | ವಾಹನ ನಿರ್ವಹಣೆಗಾರರು | 17000 | |

**ಪ್ರಧಾನ ವ್ಯವಸ್ಥಾಪಕರು**